ಇಂದು ದಿನಾಂಕಃ12.01.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ದಿನಾಂಕ 01-02-2016 ರಂದು ಪೋಲಿಸರು ನಾನು ಮತ್ತು ನನ್ನ ಗಂಡ ವಾಸವಿದ್ದ ಚಿಕ್ಕೇರೂರನ ಬಾಡಿಗೆ ಮನೆಗೆ ಕರೆದುಕೊಂಡು ಹೋಗಿ ಪಂಚನಾಮೆ ಮಾಡಿದರು. ಆ ಸಮಯದಲ್ಲಿ ನಾನು ನನ್ನ ತಾಯಿ ಚಾಸಾ-5, ಚಾಸಾ-3 ಮತ್ತು 4 ರವರು ಇದ್ದರು. ಸದರಿ ಪಂಚನಾಮೆಯನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ. ಸದರಿ ಪೋಟೋವನ್ನು ನಿಪಿ-7 ಎಂದು ಗುರುತಿಸಲಾಯಿತು. ಈ ಪಂಚನಾಮೆ ಆದ ನಂತರ ನಮ್ಮ ಮದುವೆಯ ಆಮಂತ್ರಣ ಪತ್ರಿಕೆ ಮತ್ತು ಪೋಟೋವನ್ನು ಪೋಲಿಸರಿಗೆ ಕೊಟ್ಟಿರುತ್ತೇನೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-8 ಮತ್ತು 9 ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿರುವ ಆರೋಪಿತರನ್ನು ನೋಡಿ ಗುರುತಿಸಿದ್ದೇನೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಎಪಿಪಿಯವರಿಂದಃ

ನಿಪಿ-1 ಪಂಚನಾಮೆಯನ್ನು ಬೆಳಿಗ್ಗೆ 10 ರಿಂದ 11 ಗಂಟೆ ಸಮಯದಲ್ಲಿ ಮಾಡಿರುತ್ತಾರೆ ಎಂದರೆ ಸರಿ. ನಾವು ಚಿಕ್ಕೇರೂರನಲ್ಲಿ ಖಾಸಿಂ ಆಲಿ ಬಳ್ಳಾರಿ ಎನ್ನುವವರ ಮನೆಯಲ್ಲಿ ಬಾಡಿಗೆ ಇದ್ದೆವು ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಸದರಿ ಸ್ಥಳದ ಹಾತ್ ನಕಾಶೆಯನ್ನು ತೆಗೆದಿರುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ವಿ ವಿ ಎಂ ವಕೀಲರಿಂದಃ

ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ದಿನಾಂಕ 30-07-1993 ನನ್ನ ಹುಟ್ಟಿದ ದಿನಾಂಕ. ನಾನು 9 ನೇ ತರಗತಿಯನ್ನು ಯಾವ ಇಸವಿಯಲ್ಲಿ ಉತ್ತೀರ್ಣಳಾಗಿರುತ್ತೇನೆಂದು ನನಗೆ ಹೇಳಲು ಬರುವುದಿಲ್ಲ. ನಮ್ಮ ಮದುವೆಯನ್ನು ಹಿರಿಯರು ನಿಶ್ಚಯಿಸಿ ಮಾಡಿರುತ್ತಾರೆ. ನಮ್ಮ ಮದುವೆಯ ಮಾತುಕತೆಯನ್ನು ಕಾಗಿನೆಲೆಯಲ್ಲಿ ನಡೆದಿರುತ್ತದೆ. ಅದರಲ್ಲಿ ಯಾರು ಯಾರು ಭಾಗವಹಿಸಿದ್ದರು ಎಂದು ನನಗೆ ಗೊತ್ತಿಲ್ಲ. ಕಾಗಿನೆಲೆಯ ಜಮಾತ್ ನಲ್ಲಿ ಮಾತುಕತೆ ಆಗಿರುತ್ತದೆ. ನಮ್ಮ ತಂದೆ ಮಾತುಕತೆಗೆ ಹೋಗಿದ್ದರು. ಅಲ್ಲಿ ಏನು ಮಾತುಕತೆ

ಆಗಿದೆ ಎಂದು ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿ. ಮದುವೆಗಿಂತ 1 ತಿಂಗಳು ಮುಂಚೆ ಬಂದು ನಮ್ಮ ಸಮಾಜದಲ್ಲಿ 1 ಲಕ್ಷದ 5 ಸಾವಿರ ಹಣ ತೆಗೆದುಕೊಂಡು ಹೋಗಿರುತ್ತಾರೆ. ನಾನು ಕಳೆದ 6 ವರ್ಷಗಳಿಂದ ಹಾವೇರಿಯಲ್ಲಿ ವಾಸವಿದ್ದೇನೆ. ನನಗೆ ಒಬ್ಬಳು ಮಗಳು ಇದ್ದಾಳೆ. ದೂರಿನಲ್ಲಿ ನನಗೆ 1 ವರ್ಷದ ಹೆಣ್ಣು ಮಗು ಇದೆ ಎಂದು ಹೇಳಿರುತೆತೇನೆ.

2. ಈ ದೂರು ನೀಡುವುದಕ್ಕು ಪೂರ್ವದಲ್ಲಿ ಆರೋಪಿತರು ತೊಂದರೆ ಕೊಟ್ಟಿರುವ ಬಗ್ಗೆ ದೂರು ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಆಗ ನಾನು ಸುಧಾರಿಸಿಕೊಂಡು ಹೋಗುತ್ತಿದ್ದೆ ಎನ್ನುತ್ತಾರೆ. ಜಮಾತ್ ನಲ್ಲಿ ಪಂಚಾಯತಿ ನಡೆದಿರುತ್ತದೆ. ಆ ಸಮಯದಲ್ಲಿ ಇಬ್ಬರು ಕಡೆಯಿಂದ ಬಹಳಷ್ಟು ಜನರು ಸೇರಿದ್ದರು. ಅವರುಗಳ ಹೆಸರು ಹೇಳಲು ಆಗುವುದಿಲ್ಲ. ನನ್ನ ಗಂಡನ ಮನೆಯವರು ಪಂಚಾಯತಿಗೆ ಸೇರಿಸಿದ್ದರು. ಅವರು ಕಡೆಯಿಂದ ಸುಮಾರು 50 ಮಂದಿ ಬಂದಿದ್ದರು. ಪಂಚಾಯತಿಯಲ್ಲಿ ನಾನು ಮತ್ತು ನನ್ನ ಗಂಡ ಬೇರೆ ಮನೆ ಮಾಡಿಕೊಂಡು ವಾಸ ಮಾಡಬೇಕೆಂದು ಹೇಳಿದ್ದರು. ಪಂಚಾಯತಿ ಆದ 6 ದಿನಗಳ ನಂತರ ಮನೆ ಮಾಡಿ ಕರೆದುಕೊಂಡು ಹೋಗಿದ್ದರು, ನಂತರ 4 ದಿನಗಳಾದ ಮೇಲೆ ಜಗಳ ಮಾಡಿದ್ದರಿಂದ ನಾನು ದೂರು ಕೊಟ್ಟಿರುತ್ತೇನೆ.

3. ಕಾಗಿನೆಲೆ ಗ್ರಾಮಕ್ಕೂ ಚಿಕ್ಕೇರೂರಿಗೂ ಎಷ್ಟು ದೂರ ಇದೆ ಎಂದರೆ ಸಾಕ್ಷಿ 30 ಕಿಮೀ ಇರುಬಹದು ಎನ್ನುತ್ತಾರೆ. ನನ್ನ ಗಂಡ ನನ್ನ ತಾಯಿಗೆ ದೂರವಾಣಿ ಕರೆ ಮಾಡಿದಾಗ ರಾತ್ರಿ 8.00 ಗಂಟೆ ಆಗಿತ್ತು. 30-01-2016 ರ ಹಿಂದಿನ ದಿನ ಆ ರೀತಿ ದೂರವಾಣಿ ಕರೆ ಮಾಡಿರುತ್ತಾರೆ. ಈ ವಿಚಾರವನ್ನು ಈ ಮೊದಲು ಎಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ರಾತ್ರಿ 10 ಗಂಟೆವರೆಗೂ ಕಾಗಿನೆಲೆಯಿಂದ ಚಿಕ್ಕೇರೂರಗೆ ಸಾಕಷ್ಟು ಬಸ್ಸುಗಳು ಓಡಾಡುತ್ತವೆ ಎಂದರೆ ಸರಿ. ನನ್ನ ಅತ್ತೆ, ಮಾವ, ಗಂಡ ಮೈದು ಎಲ್ಲರೂ ಬಂದಿದ್ದರು. ನನ್ನ ತಂದೆ ಮತ್ತು ತಾಯಿ ಮರುದಿನ ಬೆಳಿಗ್ಗೆ 9.00 ಗಂಟೆಗೆ ಬಂದಿರುತ್ತಾರೆ. ಅವರ ಜೊತೆ ಬೇರೆ ಯಾರು ಬಂದಿಲ್ಲ. ನಾವು ಬಾಡಿಗೆ ಇದ್ದ ಮನೆಗೆ ಬಂದಿರುತ್ತಾರೆ. ಈ ವಿಚಾರವನ್ನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕ್ಕೇರೂರು, ಹಂಸಬಾವಿ ಹಾಗೂ ಹಿರೇಕೆರೂರನಲ್ಲಿ ಸರಕಾರಿ ಆಸ್ಪತ್ರೆಗಳು ಇವೆ ಎಂದರೆ ಸರಿ. ನನ್ನ ತಂದೆ ತಾಯಿ ಬಂದು ನನ್ನ ಗಂಡನಿಗೆ, ಅತ್ತೆ ಮಾವನಿಗೆ ನಮ್ಮ ಮಗಳನ್ನು ಕಳುಹಿಸಿ ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿದರು. ನಾವು ಬಾಡಿಗೆ ಇದ್ದ ಮನೆ ನಮ್ಮ ಅತ್ತೆ ಮಾವ ಇದ್ದ ಮನೆಯಿಂದ ಸುಮಾರು 10 ರಿಂದ 20 ಅಡಿ ಅಂತರದಲ್ಲಿ ಇತ್ತು. ಸದರಿ ಗಲಾಟೆ ಎಷ್ಟು ಸಮಯ ನಡೆಯಿತು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಮೊದಲು ನನ್ನ ತಾಯಿಗೆ ಹೊಡೆದರು, ನಂತರ ನನಗೆ ಹೊಡೆದಿರುತ್ತಾರೆ. ನನಗೆ ಹೊಡೆದಿದ್ದಾರೆ ಎಂದು ಪೋಲಿಸರಿಗೆ ಹೇಳಿರುತ್ತೇನೆ. ನನ್ನ ತಲೆಯನ್ನು ಗೋಡೆಗೆ ಡಿಕ್ಕಿ ಪಡಿಸಿದಾಗ ಗಾಯವಾಗಿರುತ್ತದೆ. ಅದಕ್ಕೆ ವೈದ್ಯರು ಚಿಕಿತ್ಸೆ ನೀಡಿರುತ್ತಾರೆ. ನನಗೆ ಮರುದಿನ ಬೆಳಿಗ್ಗೆ ಎಚ್ಚರ ಬಂದಿರುತ್ತದೆ, ಆಗ ಎಷ್ಟು ಸಮಯವಾಗಿತ್ತು

ಎಂದು ನೆನಪಿಲ್ಲ. ನನ್ನ ಗಂಡ ನನ್ನ ತಲೆಯನ್ನು ಗೋಡೆಗೆ ಡಿಕ್ಕಿ ಪಡಿಸಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವ ನನ್ನ ತಾಯಿಗೆ ಕೈಯಿಂದ ದೂಡಿ ಕಲ್ಲಿನ ಮೇಲೆ ಬೀಳಿಸಿ, ಕಾಲಿನಿಂದ ಒದ್ದರು. ನನ್ನ ತಾಯಿಗೆ ಕಾಲಿನ ನರಕ್ಕೆ ಪೆಟ್ಟಾಗಿತ್ತು, ಎಡಗೈಯಲ್ಲಿ ರಕ್ತ ಗಾಯವಾಗಿತ್ತು. ರಕ್ತ ಬಟ್ಟೆಗಳಿಗೆ ತಾಗಿತ್ತಾ ಎಂದರೆ, ನನಗೆ ಎಚ್ಚರ ತಪ್ಪಿತ್ತು ನೋಡಿಲ್ಲ ಎನ್ನುತ್ತಾರೆ. ನನ್ನ ತಾಯಿಗೆ ನನ್ನ ಮಾವ, ಕೈಯಿಂದ ದೂಡಿ ಕಾಲನಿಂದ ಒದ್ದಿರುತ್ತಾರೆ ಎಂದು ಸುಳ್ಳು ಹೋಳತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.